

ಕನ್ನಡ ಸಾಹಿತ್ಯಲೋಕದ ವಿಶಿಷ್ಟ ಜೋಡಿ: ಹಂ.ಪ. ನಾಗರಾಜಯ್ಯ ಮತ್ತು ಕಮಲಾ ಹಂಪನಾ

ಅಲ್ಲಿಯೇ ಇದ್ದ ಹಂಪನಾ, ಅವರಿಂದ ಫೋನ್ ಪಡೆದು ತಮಾಷೆ ಮುಂದುವರಿಸಿದರು. 'ಕಮಲಾ ಓದುವಾಗ ನಾನು ಪಕ್ಕದ ಮಂಚದಲ್ಲಿ ಮಲಗಿದ್ದೆ. ನಗುವಿನಿಂದ ಅವಳ ಹೊಟ್ಟೆ ಕುಣಿಯುತ್ತಿತ್ತು. ನಾನು ಅದನ್ನೇ ಬಹಳ ಹೊತ್ತು ನೋಡಿ ಮನಸ್ಸಿನಲ್ಲಿ ಅಂದುಕೊಂಡೆ, ಅವಳು ತುಂಬು ಗರ್ಭಿಣಿ ಆಗಿದ್ದಾಗಲೂ ಇಷ್ಟು ಹೊಟ್ಟೆ ಕುಣಿಸಿ ನಕ್ಕಿರಲಿಲ್ಲ' ಎಂದು ತಮಾಷೆ ಮಾಡಿದ್ದರು. 'ಒಂಬತ್ತು ತಿಂಗಳ ಬೆಳವಣಿಗೆಗೆ ಇಲ್ಲದ ಶಕ್ತಿ ನನ್ನ ಲೇಖನಕ್ಕೆ ಇದೆ ನೋಡಿ' ಎಂದು ನಾನು ತಮಾಷೆ ಮಾಡಿದ್ದೆ. ಆ ಪುಸ್ತಕ ಬಿಡುಗಡೆಯಾಗಿ ಇಪ್ಪತ್ತೇ ದಿನಕ್ಕೆ ಮೊದಲನೇ ಮುದ್ರಣ ಖಾಲಿ ಆದಾಗ ಆದ ಸಂತೋಷಕ್ಕಿಂತ ಕಮಲಮ್ಮನವರ ಮೆಚ್ಚುಗೆಯೇ ಹೆಚ್ಚೆನಿಸಿತ್ತು.

ಕುವೆಂಪು ಸಾಹಿತ್ಯ ಪ್ರಚಾರದ ಕೆಲಸದಲ್ಲಿ ರಾಜ್ಯ, ಹೊರರಾಜ್ಯಗಳಲ್ಲಿ ಬಹಳಷ್ಟು ಊರುಗಳಲ್ಲಿ ಹಂಪನಾ ದಂಪತಿಯೊಂದಿಗೆ ನಮ್ಮ ಕುಟುಂಬಗಳು ಒಟ್ಟಿಗೆ ಹೋಗಿ ಭಾಗವಹಿಸುತ್ತಿದ್ದೆವು. ಕಮಲಾ ಅವರು ತುಂಬಾ